# ಚುಕ್ಕಿ ಚಿತ್ರದ ನಾದ

ನಾದ, ಲಯಗಳ ಚುಕ್ಕಿಗಳ ಜೋಡಣೆಯಿಂದ ಆರಂಭವಾಗುವ ಹಾಗೂ ಯಾವ ಬಿಂದುವನ್ನು ಆತುಕೊಂಡರೂ ಅರ್ಥಸ್ಫೋಟದ ಸಾಧ್ಯತೆಯ ಈ ಬರಹ, ಸೃಷ್ಟಿವೈಚಿತ್ರಗಳನ್ನೂ ಸ್ವಭಾವವೈದೃಶ್ಯಗಳನ್ನೂ ಕಾಣಿಸುತ್ತಾ, 'ಸ್ವರ್ಗೀಯ ಆನಂದ'ದ ಪರಿಕಲ್ಪನೆಯ ಬಿಂದುವಿಗೆ ಸಹೃದಯರನ್ನು ತಂದುನಿಲ್ಲಿಸುತ್ತದೆ.

■ ಕೆ.ಟಿ. ಗಟ್ಟಿ

ಕವಿತೆ ಬರೆಯದೆ ಕವಿಯಾಗಲಿಕ್ಕಾಗುವುದಿಲ್ಲ. ಕವಿಯಾಗಿರದವನಿಗೆ ಕವಿತೆ ಬರೆಯಲಿಕ್ಕಾಗುವುದಿಲ್ಲ. 'ಕವಿಯಾಗಿರುವುದು' ಎಂದರೆ 'ಕವಿಮನದವನಾಗಿರುವುದು' ಎಂದರ್ಥ. 'ಕವಿ ಮತ್ತೆ ಆಗುವುದಲ್ಲ, ಅವನು ಹುಟ್ಟಿನಿಂದಲೇ ಕವಿಯಾಗಿರುತ್ತಾನೆ' ಎಂಬುದು ಬಹಳ ಪ್ರಚಲಿತವಾದ ಒಂದು ವಾದ. ಆದರೆ ಕಾವ್ಯ ಪ್ರಕಾಶಕ್ಕೆ ಬರುವುದು ಜನಜಿಹ್ವೆಯಲ್ಲಿರುವ ಮಾತಿನಲ್ಲಿ ತಾನೆ? ಕವಿತೆಯನ್ನು ಬರೆಯಬೇಕಾದರೆ ಆ ಮಾತನ್ನು ಆಡಲು, ಬರೆಯಲು ಗೊತ್ತಿರಲೇಬೇಕಲ್ಲ? ಆದುದರಿಂದ ಕವಿಯ 'ಹುಟ್ಟುವಿಕೆ'ಯನ್ನು ಆತ ತಾಯಿಯ ಗರ್ಭದಿಂದ ಹೊರಬಿದ್ದ ಸಂದರ್ಭ ಎಂದು ಪರಿಭಾವಿಸುವುದು ಹುಂಬತನವಾದೀತು. ಕವಿ ಯಾವುದೋ ಒಂದು ದಿನ, ತನ್ನ ಬದುಕಿನ ಯಾವುದೋ ಒಂದು ಸನ್ನಿವೇಶದಲ್ಲಿ 'ಹುಟ್ಟು'ತ್ತಾನೆ. ಈ ಹುಟ್ಟುವಿಕೆಗೆ ವಾಲ್ಮೀಕಿ ಕವಿಯಾಗಿ ಹುಟ್ಟಿದುದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಎಲ್ಲಾ ಕವಿಗಳು ಹುಟ್ಟಿದ್ದು ಹೀಗೆಯೇ.

ಹಾಗಾದರೆ ಕವಿಯಾಗುವುದು ಹೇಗೆ? ಕವಿಯಾಗುವುದು ಹೇಗೆ ಎಂದು ಕವಿ ಮಾತ್ರ ಬಲ್ಲ. ಆದರೆ ಅವನಿಗೆ ಕವಿಯಾಗಲು ಮಾತ್ರ ಗೊತ್ತು; ಹೇಗೆ ಎಂದು ಹೇಳಲು ಅವನಿಗೆ ತಿಳಿಯದು. ಆದರೆ ಕವಿತೆ ಬರೆಯುವುದಕ್ಕೆ ಮೊದಲು ಕವಿಯಾಗಿರುವವನ ಕೆಲವು ಲಕ್ಷಣಗಳನ್ನು ಹೇಳಬಹುದು. ಅವನು ಸಹೃದಯಿಯಾಗಿರುತ್ತಾನೆ. ಕಣ್ಣಿಗೆ ಬಿದ್ದ ಎಲ್ಲಾ ಕವಿತೆಗಳನ್ನೂ ಓದುತ್ತಾನೆ. ಓದಿ ಅರ್ಥ ಮಾಡಿಕೊಳ್ಳುತ್ತಾನೆ, ಮೆಚ್ಚಿಕೊಳ್ಳುತ್ತಾನೆ; ಕವಿತೆಗಳನ್ನು ಹುಡುಕಿಕೊಂಡು ಹೋಗುತ್ತಾನೆ. ಬರೆದಿರದ ಅರ್ಥಾತ್ ಹುಟ್ಟಲಿರುವ ಕವಿತೆಗಳನ್ನು ಕೂಡ ಅವನು ಕಾಣುತ್ತಾನೆ. ಬರೆಯುವ ಮೊದಲು, ಕವಿತೆ ಅವನ ಒಳಗೆ ಅರ್ಥಮಾಡಿಕೊಳ್ಳುವಿಕೆಯ ಒಂದು ಬಿಂದುವಾಗಿ, ಅನಂತರ ನಿಧಾನವಾಗಿ, ಅಂಥ ಸಾವಿರಾರು ಕಾವ್ಯಾನುಭೂತಿಯ ಬಿಂದುಗಳ ಒಂದು ಹೆಣಿಗೆ ಅವನಲ್ಲಿ ಸೃಷ್ಟಿಯಾಗುತ್ತದೆ. ಅರ್ಥ ಮಾಡಿಕೊಳ್ಳುವಿಕೆ ಎಂಬುದು ಸಂವೇದನೆ ಎಂದು ತಿಳಿದುಕೊಳ್ಳಬೇಕು. ಆ ಸಂವೇದನೆ ಅಂತರ್ಮುದ್ರಿತ, ಅನವರತ ಎಂದು ಕೂಡ ತಿಳಿಯಬೇಕು.

ಕನಕದಾಸರಂಥ ಒಬ್ಬ ಅನುಭಾವಿ, ಷೇಕ್ಸ್‌ಪಿಯರನಂಥ ಒಬ್ಬ ಕವಿ, ಮೈಕೆಲ್ ಏಂಜಲೊನಂಥ ಒಬ್ಬ ಕಲಾವಿದ ಜಕ್ಕಣನಂಥ ಒಬ್ಬ ಶಿಲ್ಪಿ, ಮಹಮ್ಮದ್ ರಫಿಯಂಥ ಒಬ್ಬ ಹಾಡುಗಾರ ಹೇಗೆ ಸೃಷ್ಟಿಯಾದ ಎಂದು ನಾವು ಕಂಡುಕೊಳ್ಳಬೇಕು. ಆಗ ನಮಗೆ ಇಂಥ ಸೃಷ್ಟಿಯ ಹಿಂದಿರುವ ಕ್ರಿಯೆ ಅರ್ಥವಾಗುತ್ತದೆ. ನಿಸರ್ಗದಲ್ಲಿ ಕೂಡ ಹೀಗೆಯೇ. ಒಂದು ಗಿಡ ಆಗುವುದು ಹೇಗೆ? ಒಂದು ಹೂ ಆಗುವುದು ಹೇಗೆ? ಹುಟ್ಟಿನಲ್ಲಿ ಯಾವುದೂ ಏನೂ



ಆಗಿರುವುದಿಲ್ಲ. ಯಾವುದು ಏನು ಎಂದು ತಿಳಿಯುವುದಿಲ್ಲ.

ಮಿಲಿಯಗಟ್ಟಲೆ ಚುಕ್ಕಿಗಳಿಂದ ಒಂದು ಚಿತ್ರವಾಗುತ್ತದೆ. ಅರ್ಥಾತ್ ಚಿತ್ರವೆಂದರೆ ಮಿಲಿಯಗಟ್ಟಲೆ ಚುಕ್ಕಿಗಳು. ಯಾವುದೇ ವಸ್ತುವೂ ಅಷ್ಟೇ; ಮಿಲಿಯಗಟ್ಟಲೆ ಅಣುಗಳು, ಪರಮಾಣುಗಳು. ಹೇಗೆ ವಿಶ್ವಸುಂದರಿಯ ಭಾವಚಿತ್ರದ ಚುಕ್ಕಿಯೊಂದರಲ್ಲಿ ಅವಳ ಸೌಂದರ್ಯ ಕಾಣಿಸದೋ ಹಾಗೆಯೇ ಆನೆಯ ಒಂದು ಅಣುವಿನಲ್ಲಿ ಆನೆಯ ಗಾತ್ರ ಕಾಣಿಸದು. ಬಂಗಾರದ ಧೂಳಿನ ಕಣದಲ್ಲಿ ಬಂಗಾರ ಕಾಣಿಸದು. ಆದರೆ ಚುಕ್ಕಿಗಳಿಂದಲೇ ಚಿತ್ರ; ಆದುದರಿಂದ ಚಿತ್ರದಲ್ಲಿರುವುದು ಏನೋ ಅದು ಚುಕ್ಕಿಯಲ್ಲಿಯೂ ಇದೆ. ಅಣುವಿನಿಂದಲೇ ಆನೆ; ಆದುದರಿಂದ ಅಣುವಿನಲ್ಲಿ ಆನೆ ಇದೆ. ಚುಕ್ಕಿ ಚುಕ್ಕಿಗಳ ಸಂಬಂಧದಿಂದ ಚಿತ್ರ ನಿರ್ಮಾಣವಾಗುತ್ತದೆ. ಅಣು ಅಣುಗಳ ಸಂಬಂಧದಿಂದ ಆನೆ ನಿರ್ಮಾಣವಾಗುತ್ತದೆ. ಅಣು ರೇಣುಗಳಲ್ಲಿಯೂ ಪರಮಾತ್ಮನನ್ನು ಕಂಡ